# ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ನಿಯಮಿತ

2ನೇ ಮಹಡಿ, ಜಿಲ್ಲಾಧಿಕಾರಿಗಳ ಕಛೇರಿ ಕಟ್ಟಡ, ಕಂದಾಯ ಭವನ ಹಿಂಭಾಗ,
ಕೆಂಪೇಗೌಡ ರಸ್ತೆ, ಬೆಂಗಳೂರು – 560 009. ದೂ : 080–22114233, 22133558

ನಂ:ಕೆಪಿಎಲ್‌ಸಿ/ಎಲ್.ಎ.ಕ್ಯೂ/ಸಿಆರ್/65/15–16 ದಿನಾಂಕ: 06–07–2015

**ಎಲ್ಲಾ ಜಿಲ್ಲಾಧಿಕಾರಿಗಳು.**
**ವಿಶೇಶ ಜಿಲ್ಲಾಧಿಕಾರಿ(ಜಾರಿದಳ), ಬೆಂಗಳೂರು.**

## ತುರ್ತು ಸಂದೇಶ

ಸರ್ಕಾರಿ ಜಮೀನುಗಳಿಗೆ ಸಂಬಂಧಪಟ್ಟ ವಿವಿಧ ರೀತಿಯ ಮಾಹಿತಿಗಳು, ಒತ್ತುವರಿ ಗುರುತಿಸುವುದು, ಒತ್ತುವರಿ ತೆರವು ಮಾಡಿಸುದುವುದು ಹಾಗೂ ಸರ್ಕಾರಿ ಜಮೀನು ಸಂರಕ್ಷಣೆ ಮುಂತಾದ ಪ್ರಕಿಯೆಗಳಿಗೆ ಸಂಬಂಧಪಟ್ಟಂತೆ ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮವನ್ನು ನೋಡಲ್ ಪ್ರಾಧಿಕಾರವವನ್ನಾಗಿ ನೇಮಿಸಿರುವ ವಿಚಾರವನ್ನು ಈ ನಿಗಮದಿಂದ ಬರೆದಿರುವ ಪತ್ರಗಳಲ್ಲಿ ತಮಗೆ ಈಗಾಗಲೇ ತಿಳಿಯಪಡಿಸಲಾಗಿರುತ್ತದೆ. ಈ ನಿಗಮ ಸರ್ಕಾರಿ ಜಮೀನು ಒತ್ತುವರಿ ವಿಚಾರದ ವಿವಿಧ ಅಂಶಗಳಿಗೆ ಸಂಬಂಧಪಟ್ಟ ಮಾಹಿತಿಗಳನ್ನು ಕ್ರೋಢಿಕರಿಸಿ ಸರ್ಕಾರಕ್ಕೆ ಸಲ್ಲಿಸುತ್ತಿದೆ.

ಪ್ರಸ್ತುತ ಅಧಿವೇಶನ ನಡೆಯುತ್ತಿರುವ ಹಿನ್ನೆಲೆಯಲ್ಲಿ, ಮಾನ್ಯ ಸದಸ್ಯರುಗಳು ಮಂಡಿಸಿರುವ ಬಹಳಷ್ಟು ಪ್ರಶ್ನೆಗಳು ಸರ್ಕಾರಿ ಜಮೀನು/ಕೆರೆ ಪ್ರದೇಶದ ಒತ್ತುವರಿ ವಿಚಾರಕ್ಕೆ ಸಂಬಂಧಪಟ್ಟಿರುತ್ತವೆ. ಸದರಿ ಪ್ರಶ್ನೆಗಳಿಗೆ ಸರ್ಕಾರಕ್ಕೆ ಉತ್ತರ ಸಲ್ಲಿಸಿದ ಬಗ್ಗೆ ಕೆಲವೊಂದು ಜಿಲ್ಲಾಧಿಕಾರಿಗಳ ಕಚೇರಿಯಿಂದ ಈ ನಿಗಮಕ್ಕೆ ಮಾಹಿತಿ ಬರುತ್ತಿಲ್ಲ.

**ಆದ್ದರಿಂದ ಎಲ್ಲಾ ಜಿಲ್ಲಾಧಿಕಾರಿಗಳು, ಇನ್ನು ಮುಂದೆ, ಸರ್ಕಾರಿ ಜಮೀನುಗಳಿಗೆ ಸಂಬಂಧಪಟ್ಟ ವಿವಿಧ ರೀತಿಯ ಮಾಹಿತಿಗಳು, ಒತ್ತುವರಿ ಗುರುತಿಸುವುದು, ಒತ್ತುವರಿ ತೆರವು ಮಾಡಿಸುವುದು ಹಾಗೂ ಸರ್ಕಾರಿ ಜಮೀನು ಸಂರಕ್ಷಣೆ ಮುಂತಾದ ಪ್ರಕಿಯೆಗಳಿಗೆ ಸಂಬಂಧಪಟ್ಟಂತೆ ಮಂಡಿಸಿರುವ ಪ್ರಶೆಗಳಿಗೆ(ಎಲ್ಎ/ಎಲ್‌ಸಿ ಪ್ರಶ್ನೆಗಳು) ಸಂಬಂಧಪಟ್ಟಂತೆ ಉತ್ತರಗಳನ್ನು ಸರ್ಕಾರಕ್ಕೆ ಸಲ್ಲಿಸಿದಾಗ ಅದರ ಒಂದು ಪ್ರತಿಯನ್ನು ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮಕ್ಕೆ ಇ–ಮೈಲ್ ಮೂಲಕ ತಪ್ಪದೇ ಕಳುಹಿಸಿಕೊಡಲು ಸೂಚಿಸಿದೆ.**

ಸಹಿ/–
(ಸುಬೋಧ್ ಯಾದವ್), ಐ.ಎ.ಎಸ್.,
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ, ನಿ.